ಸೇಡಂ-ಹಂದರ್ಕಿ ರಸ್ತೆ ಕಾಮಗಾರಿ ಪ್ರಗತಿ.

666 - ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸೇಡಂ ಹಂದರ್ಕಿ ರಸ್ತೆ ಹೈದ್ರಾಬಾದ್- ಕರ್ನಾಟಕ ಅಭಿವೃದ್ಧಿ ಮಂಡಳಿ ಯೋಜನೆ ಅಡಿಯಲ್ಲಿ ಮಂಜೂರಾಗಿ ಟೆಂಡರ್ ಆಗಿ ಎರಡು ವರ್ಷಗಳಾದರೂ ವೇಳೆ ಪ್ರಕಾರ ಕೆಲಸ ಪ್ರಗತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗುತ್ತಿಗೆದಾರರು ಯಾವ ಯಾವ ತಿಂಗಳಗಳಲ್ಲಿ ಎಷ್ಟೆಷ್ಟು ಕಿಮೀಗಳ ಕೆಲಸ ಮುಗಿಸಬೇಕಾಗಿತ್ತು;

ಇ) ಸಕಾಲದಲ್ಲಿ ಮುಗಿಸಲಾರದ ಗುತ್ತಿಗೆದಾರರ ಮೇಲೆ ಇಲಾಖೆಯವರು ಕೈಗೊಂಡಿರುವ ಕ್ರಮವೇನು;

ಈ) ಈ ರೋಡಿನಲ್ಲಿರುವ ದೊಡ್ಡ ದೊಡ್ಡ ಹೊಂಡಗಳು ಮಳೆಗಾಲದಲ್ಲಿ ರೋಡಿನ ಮೇಲೆ ಕೆರೆಯಲ್ಲಿರುವ ನೀರಿನಂತೆ ಕಾಣಿಸುವುದು ಸರಕಾರದ ಗಮನಕ್ಕೆ ಬಂದಿರುವುದೇ;

ಉ) ಬಸ್ಸುಗಳು, ಕಾರುಗಳು, ಜೀಪ್ಗಳು ಈ ರಸ್ತೆಯ ಮೇಲೆ ಸಂಚರಿಸಿದರೆ ಈ ನೀರಿನಲ್ಲಿ ಮುಳುಗಿ ಹೋಗುವುದು ಸರಕಾರದ ಗಮನಕ್ಕೆ ಬಂದಿರುವುದೇ;

ಊ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮವೇನು;

ಋ) ಈ ರಸ್ತೆ ಟೆಂಡರ್ ಕೆಲಸ ಪೂರ್ತಿ ಮಾಡಿ ಆ ಭಾಗದ ನಾಗರೀಕರಿಗೆ ಸಂಚಾರಕ್ಕೆ ಅನುಕೂಲ ಮಾಡಿಕೊಂಡು ಜರೂರು ಕ್ರಮ ಕೈಕೊಳ್ಳಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) ಟೆಂಡರ್ ಒಪ್ಪಂದ ಕರಾರಿನುಸಾರ 28 ತಿಂಗಳಲ್ಲಿ (ಅಂದರೆ 30-10-93ರ ವರೆಗೆ) 29 ಕಿಮೀ ರಸ್ತೆ ದಾಂಬರೀಕರಣ ಮಾಡಬೇಕಾಗಿತ್ತು. ಅವಧಿಯ ತಕ್ಕಂತೆ ಆರ್ಥಿಕ ಪ್ರಗತಿಯನ್ನು ಕೊಡಲು ಟೆಂಡರದಲ್ಲಿ ಕೆಳಗಿನಂತೆ ಶರತ್ತು ಹಾಕಲಾಗಿದೆ.

ಒಟ್ಟು ಕೆಲಸವನ್ನು ಮುಗಿಸಲು ಕೊಟ್ಟ ಅವಧಿ 28 ತಿಂಗಳು

ಮೊದಲು $\frac{1}{4}$ ಅವಧಿಗೆ ಎಂದರೆ 7 ತಿಂಗಳಲ್ಲಿ	$\frac{1}{10}$ ಮೊತ್ತಕ್ಕೆ ಆರ್ಥಿಕ ಮತ್ತು ಭೌತಿಕ ಪ್ರಗತಿ ಕೊಡುವದು ಎಂದರೆ 16.434
ಎರಡನೆಯ $\frac{1}{2}$ ಅವಧಿಗೆ ಎಂದರೆ ಮುಂದಿನ 7 ತಿಂಗಳಲ್ಲಿ	$\frac{4}{10}$ ಲಕ್ಷಗಳು. ಮೊತ್ತಕ್ಕೆ ಎಂದರೆ ರೂ. 59.16 ಲಕ್ಷಗಳಿಗೆ ಆರ್ಥಿಕ 59.16 ಆರ್ಥಿಕ ಲಕ್ಷಗಳಿಗೆ ಮತ್ತು ಭೌತಿಕ ಪ್ರಗತಿ ಕೊಡುವುದು.
ಮೂರನೆಯ $\frac{1}{2}$ ಅವಧಿಗೆ ಎಂದರೆ ಮುಂದಿನ 7 ತಿಂಗಳಲ್ಲಿ	$\frac{8}{10}$ ಮೊತ್ತಕ್ಕೆ ಎಂದರೆ ರೂ. 70.99 ಲಕ್ಷಗಳಿಗೆ ಆರ್ಥಿಕ ಮತ್ತು ಭೌತಿಕ ಪ್ರಗತಿ ಕೊಡುವುದು.
ಕೊನೆಯ ಅವಧಿಯಲ್ಲಿ ಎಂದರೆ ಮುಂದಿನ 7 ತಿಂಗಳಲ್ಲಿ	ಉಳಿದ ಮೊತ್ತಕ್ಕೆ ಎಂದರೆ ರೂ. 17.756 ಲಕ್ಷಗಳಿಗೆ ಆರ್ಥಿಕ ಮತ್ತು ಭೌತಿಕ ಪ್ರಗತಿ ಕೊಡುವುದು.
ಒಟ್ಟು 28 ತಿಂಗಳ ಅವಧಿಗೆ	**ರೂ 164.34 ಲಕ್ಷಗಳು.**

ಇ) ಟೆಂಡರ್ ಒಪ್ಪಂದದ ಪ್ರಕಾರ ಗುತ್ತಿಗೆದಾರರ ಮೇಲೆ ಪ್ರತಿ ದಿನ ರೂ.10 ರಂತೆ ದಿನಾಂಕ 15-11-92 ರಿಂದ ದಂಡ ವಿಧಿಸಲಾಗಿದೆ. ಕಾಮಗಾರಿಯನ್ನು ಶೀಘ್ರವಾಗಿ ಮುಗಿಸುವಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಈ) ಈ ರಸ್ತೆಯು ಅತಿ ಹೆಚ್ಚು ಭಾರ ಹೊತ್ತ ವಾಹನಗಳ ಸಂಚಾರಕ್ಕೆ ಒಳಪಟ್ಟಿದ್ದು, ರಸ್ತೆಯ ಕೆಲವು ಕಡೆ · ತಗ್ಗುಗಳು ಆಗಿರುತ್ತದೆ.

ಉ) ಇಂತಹ ಪರಿಸ್ಥಿತಿ ಇರುವುದಿಲ್ಲ.

ಊ) ದುರಸ್ತಿ ಕಾಮಗಾರಿ ಪ್ರಗತಿಯಲ್ಲಿದೆ.

ಋ) ಈ ರಸ್ತೆಯ ಕೆಲಸವನ್ನು ಸಮರ್ಪಕವಾಗಿ ಶೀಘ್ರವಾಗಿ ಮುಗಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಲಾಗಿದೆ.

11.30 ಪಿ.ಎಂ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಸನ್ಮಾನ್ಯ ಸಭಾಧ್ಯಕ್ಷರೇ, ನನ್ನ (ಅ) ಪ್ರಶ್ನೆಯಲ್ಲಿ ಗುತ್ತಿಗೆದಾರರು ಯಾವ ಯಾವ ತಿಂಗಳುಗಳಲ್ಲಿ, ಎಷ್ಟೆಷ್ಟು ಕಿಲೋಮೀಟರುಗಳ ಕೆಲಸ ಮುಗಿಸಬೇಕಾಗಿತ್ತು ಎಂದರೆ, ಟೆಂಡರ್ ಒಪ್ಪಂದದ ಕರಾರಿನ ಪ್ರಕಾರ, 28 ತಿಂಗಳಲ್ಲಿ ಮುಗಿಸಬೇಕಾಗಿತ್ತು. ಮತ್ತು ಈ ಕೆಳಕಂಡಂತೆ ಷರತ್ತು ಹಾಕಲಾಗಿದೆ ಎಂದು ತಿಳಿಸಿ, ಮೊದಲು ಕಾಲು ಅವಧಿಗೆ ಎಂದರೆ, ಮೊದಲ 7 ತಿಂಗಳಲ್ಲಿ, 30-1-92ರ ವರೆಗೆ, ಹತ್ತನೇ ಒಂದು ಮೊತ್ತಕ್ಕೆ ಆರ್ಥಿಕ ಮತ್ತು ಭೌತಿಕ ಪ್ರಗತಿ ಕೊಡುವುದು ಎಂದರೆ, 16.434 ಲಕ್ಷ ರೂಪಾಯಿಗಳ ಕೆಲಸ ಮಾಡಬೇಕಾಗಿತ್ತು. ಎರಡನೇ ಹಂತ ಎಂದರೆ, 14 ತಿಂಗಳಲ್ಲಿ, 59.16 ಲಕ್ಷ ರೂಪಾಯಿಗಳ ಕೆಲಸ ಮಾಡಬೇಕಾಗಿತ್ತು. ಮೊದಲನೇ ಹಂತದ 7 ತಿಂಗಳಲ್ಲಿ, ಗುತ್ತಿಗೇದಾರರಿಗೆ ಒಂದು ವೇಳೆ ದಂಡ ವಿಧಿಸಿದ್ದರೆ, ಈ ಪ್ರಕಾರ ವಿಳಂಬವಾಗುತ್ತಿರಲಿಲ್ಲ ಅಲ್ಲವೇ? ನೀವು ಮೊದಲನೇ ಹಂತದಲ್ಲಿ ಗುತ್ತಿಗೆದಾರರಿಗೆ ದಂಡ ವಿಧಿಸಿಲ್ಲ. ಆದಕ್ಕಾಗಿಯೇ ಅವರು ಇಲ್ಲಿಯವರೆಗೂ ಕೆಲಸವನ್ನು ಮುಗಿಸಿಲ್ಲ. ನನ್ನ (ಉ) ಪ್ರಶ್ನೆಯೇ ಬಸ್ಸುಗಳು, ಕಾರುಗಳು, ಜೀಪುಗಳು ಈ ರಸ್ತೆಯ ಮೇಲೆ ಸಂಚರಿಸಿದರೆ, ಈ ನೀರಿನಲ್ಲಿ ಮುಳುಗಿ ಹೋಗುವುದು ಸರ್ಕಾರದ ಗಮನಕ್ಕೆ ಬಂದಿರುವುದೇ, ಎಂದರೆ, "ಇಂತಹ ಪರಿಸ್ಥಿತಿ ಇರುವುದಿಲ್ಲ" ಎಂದು ಹೇಳಿದ್ದಾರೆ. ನಾನೇ ಸ್ವತಃ 25-7-93ರಲ್ಲಿ ಈ ರಸ್ತೆಯ ಮೇಲೆ ಬೆನಕನಹಳ್ಳಿ ಹಾಗೂ ಕೊಳ್ಳ ಗ್ರಾಮಗಳಿಗೆ ಜೀಪಿನಿಂದ ಹೋದರೆ, ನಾನು ಬರುವ ವೇಳೆ ಅಲ್ಪಸ್ವಲ್ಪ ಮಳೆಬಂದು, ನನ್ನ ಜೀಪು ಆ ರೋಡಿನ ಮೇಲೆ ಬರುವಾಗ, ಆ ರೋಡಿನ ಮೇಲೆ ಕೆರೆಯಿಂದ ನೀರು ಬಂದು ನಿಂತದ್ದು ಕಂಡು ಬರುತ್ತಿತ್ತು. ಆ ನೀರಿನಲ್ಲಿ ನನ್ನ ಜೀಪು ಅರ್ಧಕ್ಕೆ ಮುಳುಗಿ ಹೋಗಿತ್ತು. ಆದರೆ, ಇವರು ಈ ಪರಿಸ್ಥಿತಿ ಇರುವುದಿಲ್ಲವೆಂದು ಕೊಟ್ಟಿರುವ ಉತ್ತರ ಸರಿಯಿಲ್ಲ. ಆದ್ದರಿಂದ, ಈಗಲಾದರೂ ಸಹ ಈ ರಸ್ತೆಯ ಕೆಲಸವನ್ನು ಬೇಗನೆ ತೆಗೆದುಕೊಂಡು, ಆ ಭಾಗದ ನಾಗರೀಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಮಾನ್ಯಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಈ ರಸ್ತೆಯ ಬಗ್ಗೆ ಬಹಳ ವಿಚಾರ ತಿಳಿದಿದೆ. ನಮ್ಮ ರೂಲ್ಸ್ ಪ್ರಕಾರ, ಯಾವ ಸದಸ್ಯರಿಗೆ ವಿಚಾರ ತಿಳಿದಿದೆ, ಅದರ ಬಗ್ಗೆ ಪ್ರಶ್ನೆ ಹಾಕಬಾರದೆಂದು ಇದೆ. ಆದರೆ, ಏನೋ ಹಾಕಿಬಿಟ್ಟಿದ್ದಾರೆ. ಇದು ದೊಡ್ಡ ರಸ್ತೆ, ಸುಮಾರು ಒಂದು ಕೋಟಿ ಅರವತ್ತಾಲ್ಕು ಲಕ್ಷ ರೂಪಾಯಿಗಳ ಕೆಲಸ ಆಗತಕ್ಕಂಥ ರಸ್ತೆ. ಇದು ವಿಳಂಬವಾಗಿದೆ. 1993ನೇ ಆಕ್ಟೋಬರ್‌ನಲ್ಲಿ ಈ ರಸ್ತೆ ಮುಗಿಯಬೇಕಾಗಿತ್ತು. ಇಲ್ಲಿಯವರೆಗೆ, ಕೇವಲ

6 ಕಿಲೋಮೀಟರ್ ರಸ್ತೆ ಮಾತ್ರ ಡಾಂಬರೀಕರಣವಾಗಿದೆ. ಮತ್ತೆ ವಿಳಂಬವಾಗಿರುವುದಕ್ಕೆ ಪ್ರತಿದಿವಸಕ್ಕೆ 10 ರೂಪಾಯಿ ದಂಡ ಹಾಕತಕ್ಕ ಕೆಲಸವನ್ನೂ ಸರ್ಕಾರವನ್ನೂ ಸರ್ಕಾರದವರು ಮಾಡಿದ್ದಾರೆ; ಕೆಲಸ ನಡೆಯುತ್ತಾ ಇದೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಬಸ್ಸು, ಕಾರು, ಜೀಪು. ಈ ರಸ್ತೆಯಲ್ಲಿ ಸಂಚರಿಸಿದರೆ ಮುಳುಗಿ ಹೋಗುವುದು ಎಂದು ಹೇಳಿದ್ದಾರೆ. ಬಸ್ ಮುಳುಗಿ ಹೋಗುವಷ್ಟು ನೀರು ಅಲ್ಲಿ ಬರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಜೀಪಿನಲ್ಲಿ ಹೋಗಿದ್ದೆ ಎಂದು ಹೇಳಿದ್ದಾರೆ. ಅದು ಹಂದರ್ಕಿಯಿಂದ ಗುರುಮಠಕಲ್‌ಗೆ ಹೋಗತಕ್ಕ ರಸ್ತೆ. ಅಲ್ಲಿ ಎರೆ ಭೂಮಿ ಇರುವುದರಿಂದ, ತಮಗೆ ಗೊತ್ತಿರುವ ಹಾಗೆ ಸಿಂಕ್ ಆಗುತ್ತದೆ. ಅಲ್ಲಿ ಕೆಲಸ ಮಾಡತಕ್ಕಂಥಾದ್ದು ಸ್ವಲ್ಪ ಕಷ್ಟವಾಗಬಹುದು. ರಸ್ತೆ ಚೆನ್ನಾಗಿಲ್ಲದಿರುವುದು, ಸಂಚಾರಕ್ಕೆ ಅಡ್ಡಿ ಆತಂಕ ಇರತಕ್ಕಂಥಾದ್ದು, ತೊಂದರೆ ಆಗತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡತಕ್ಕಂಥ ಮಟ್ಟದಲ್ಲಿ ಅದು ಇದೆ ಎನ್ನತಕ್ಕಂಥ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ. ಇನ್ನು ಮಾನ್ಯ ಸದಸ್ಯರು, ಈ ರಸ್ತೆ ಜಾಗ್ರತೆ ಆಗಬೇಕೆಂದು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಅದನ್ನು ತೀವ್ರಗತಿಯಿಂದ, 1994ರ ಜೂನ್‌ನೊಳಗೆ ಮುಗಿಸತಕ್ಕಂಥ ಕೆಲಸ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿಕೊಂಡಿದೆ, ಅಷ್ಟರೊಳಗೆ ಕೆಲಸ ಆಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಅಧ್ಯಕ್ಷರೇ, ಮಿತ್ರ ಶಾಸಕರಾದ ಬಸವಂತರೆಡ್ಡಿಯವರು ಕೇಳತಕ್ಕಂಥ ಪ್ರಶ್ನೆ, ಶಾಸಕರು ನಿಜವಾದ ಕಷ್ಟದಲ್ಲಿ ಇರುವಂಥ ಪ್ರಶ್ನೆ. ಶಾಸಕರು ಜೀಪು ತೆಗೆದುಕೊಂಡು ಹೋಗುತ್ತಿರುವಾಗ, ಮುಳುಗಿ ಹೋಗತಕ್ಕ ಪರಿಸ್ಥಿತಿ ಇದೆ ಎಂದು ಹೇಳಿದ್ದಾರೆ. ಅವರೇ ಮುಳುಗಬೇಕಾಗಿತ್ತು, ಆದರೆ, ಅವರು ಮುಳುಗಿಲ್ಲ, ಜೀಪಂತೂ ಮುಳುಗಿದೆ. ಮಾನ್ಯ ಮಂತ್ರಿಗಳಿಗೆ, ನಾನು ಹೇಳತಕ್ಕಂಥಾದ್ದು ಇಷ್ಟೆ. ಹೈದರಾಬಾದ್-ಕರ್ನಾಟಕದ ಕಾಮಗಾರಿ ಏನು ತೆಗೆದುಕೊಂಡಿದ್ದೀರಿ, ಅದಕ್ಕೆ 28 ತಿಂಗಳು ಅಗ್ರಿಮೆಂಟ್ ಮಾಡಿ ಕೊಟ್ಟಿದ್ದೀರಿ. ಆದರೆ, ಆ ರೋಡ್ ಮೇಲೆ ಮಣ್ಣೂ ಸಹಿತ ಅವರು, ತಂದು ಹಾಕಿಲ್ಲ. ನೀವು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಗುತ್ತಿಗೆದಾರರು, ಅವರ ಮನೆಯಲ್ಲಿ ಕುಳಿತಿದ್ದಾರೆ. 28 ತಿಂಗಳಿಂದ 20 ಪರ್ಸಂಟ್ ಕೆಲಸವೂ ಆ ರಸ್ತೆಯಲ್ಲಿ ಪ್ರೋಗ್ರೆಸ್ ಆಗಿಲ್ಲ. ಇಂತಹ ಗುತ್ತಿಗೆದಾರರ ಮೇಲೆ ತಾವು ಏನು ಕಠಿಣವಾದ ಕ್ರಮ ತೆಗೆದುಕೊಂಡಿದ್ದೀರಿ? ಶಹಾಬಾದ್, ಚಿತ್ತಾಪುರ, ಸೊಂಡೂರು ರಸ್ತೆ ಕೂಡ ಗುತ್ತಿಗೆ ಕೊಟ್ಟಿದ್ದೀರಿ. ಗುತ್ತಿಗೆದಾರರು ಬಿಟ್ಟು ಹೋದರು, ಅದನ್ನು ಕ್ಯಾನ್ಸಲ್ ಮಾಡಿದ್ದೀರಿ. ಈ ರೀತಿ ಕ್ಯಾನ್ಸಲ್ ಮಾಡುವುದಕ್ಕೂ ಸಹಿತ, ನಿಮ್ಮ ಅಧಿಕಾರಿಗಳು ನೇರವಾಗಿ ಅವರಿಗೆ ನೋಟೀಸ್ ಕೊಡಲಿಲ್ಲ. ಇಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಕಂಟ್ರಾಕ್ಟರ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ತಾವು ಹೇಳುತ್ತೀರಿ ರೋಡ್ ಸಿಂಕ್ ಆಗುತ್ತದೆಂದು. ಅಂದರೆ ಆ ಭಾಗ ಪೂರ್ತಿ ಸಿಂಕ್ ಆಗತಕ್ಕಂಥ ರೋಡ್ ಇದೆ. ಅಂದರೆ ಆ ಊರಿಗೆ ರೋಡ್ ಮಾಡಬಾರದು ಎಂದು ಅರ್ಥವೇ? ಆದ್ದರಿಂದ ಯಾವಾಗ ತಾವು ಮಾಡುತ್ತೀರಿ? ನಮ್ಮ ಸರ್ಕಾರದ ನೀತಿ ಪ್ರಕಾರ ಯಾವಾಗ ಮಾಡುತ್ತೀರಿ? ಯಾವಾಗ ಹೆಡ್ ಲೈನ್ ಇದೆ? ಯಾವ ತಿಂಗಳ ಒಳಗೆ ತಾವು ಮುಗಿಸಿಕೊಡುತ್ತೀರಿ? ಈ ಬಗ್ಗೆ ನೇರವಾದ ಉತ್ತರವನ್ನು ನಮ್ಮ ಹೈದ್ರಾಬಾದ್-ಕರ್ನಾಟಕ ಭಾಗದ ಶಾಸಕರಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಸದಸ್ಯರಿಗೆ ನಾನು ನೇರವಾದ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಉತ್ತರ ಕೇಳಿದರೋ ಇಲ್ಲವೋ ನನಗೆ ಗೊತ್ತಿಲ್ಲ. 6 ಕಿಲೋಮೀಟರ್ ರಸ್ತೆ ಡಾಂಬರ್ ಆಗಿದೆ. ಟೆಂಡರ್ ಪ್ರಕಾರ ಅವನ್ನು ಆಕ್ಸೋಬರ್

93ಕ್ಕೆ ಮಾಡಬೇಕಾಗಿತ್ತು ಮಾಡಿಲ್ಲ. ಪ್ರತಿ ದಿವಸಕ್ಕೆ 10 ರೂಪಾಯಿಯಂತೆ ದಂಡ ವಿಧಿಸಲಾಗಿದೆ. ಜೂನ್ 94ಕ್ಕೆ ಈ ಕೆಲಸವನ್ನು ಮಾಡಿ ಮುಗಿಸಲು ಸರ್ಕಾರ ಕೆಲಸ ತೀವ್ರಗತಿಯಿಂದ ಮಾಡುತ್ತಿದೆ ಎಂದು ಹೇಳಿದ್ದೇನೆ.

ಗಡಿ ಪ್ರದೇಶಾಭಿವೃದ್ಧಿ ಕೈಗೊಂಡಿರುವ ಕ್ರಮಗಳು

669 - ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಗಡಿ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಇದಕ್ಕಾಗಿ ನಿಗಧಿಗೊಳಿಸಿದ ಹಣವೆಷ್ಟು?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಗಡಿ ಪ್ರದೇಶದ ತಾಲ್ಲೂಕುಗಳಲ್ಲಿ ಸಾಮಾಜಿಕ, ಆರ್ಥಿಕ ಒಳ ಹಂದರವನ್ನು ರಚಿಸಿ ತನ್ಮೂಲಕ ಗಡಿ ತಾಲ್ಲೂಕುಗಳ ಸಾಮಾಜಿಕ, ಆರ್ಥಿಕ ಬೆಳವಣಿಗೆಯನ್ನು ತ್ವರಿತಗೊಳಿಸುವುದಕ್ಕಾಗಿ ಈ ಕಾರ್ಯಕ್ರಮವನ್ನು 1990-91ನೇ ಸಾಲಿನಿಂದ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ರಾಜ್ಯದ 15 ಜಿಲ್ಲೆಗಳ 52 ಗಡಿ ತಾಲ್ಲೂಕುಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. 1993-94ನೇ ಸಾಲಿಗೆ 15.00 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ. 1990-91ರಲ್ಲಿ 5.00 ಕೋಟಿ ರೂ. 1991-92ರಲ್ಲಿ 10.00 ಕೋಟಿ ರೂ. ಮತ್ತು 1992-93ರಲ್ಲಿ 15.00 ಕೋಟಿ ರೂ.ಗಳನ್ನು ನಿಗಧಿಪಡಿಸಲಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಗಡಿನಾಡು ಅಭಿವೃದ್ಧಿಗೆ ಕೇವಲ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬೆಳವಣಿಗೆಯಾಗತಕ್ಕಂಥ ಒಂದೇ ವಿಚಾರ ಅಂತ ಅಲ್ಲ, ಗಡಿ ಬೆಳವಣಿಗೆಗೆ ಒಂದು ಹೊಸ ಚಿಂತನೆ ಆಗಬೇಕಾಗಿದೆ. ಆ ಹೊಸ ಚಿಂತನೆ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಕೇವಲ ಒಂದೆರಡು ರಸ್ತೆ ಮಾಡಿ, ಕಟ್ಟಡ ಕಟ್ಟತಕ್ಕಂಥಾದ್ದು ಅಲ್ಲ. ಈ ಗಡಿ ಬೆಳವಣಿಗೆ ಅಂದರೆ ಅದಕ್ಕೊಂದು ವಿಶೇಷವಾದಂತಹ ಕಾರ್ಯಕ್ರಮ, ಒಂದು ಯೋಜನೆ, ಭಾಷೆಯ ಬಾಂಧವ್ಯ ಅಲ್ಲಿಯ ಬೆಳವಣಿಗೆ ಆ ಗಡಿಯಲ್ಲಿ ಏನೇನು ಆಗಬೇಕು ಈ ದಿಕ್ಕಿನಲ್ಲಿ ಸರ್ಕಾರ ಏನಾದರೂ ಯೋಜನೆ ಮಾಡಿದೆಯೇ? ಇದು ಬಹಳ ಮುಖ್ಯವಾದುದು. ಪ್ರತಿ ವರ್ಷ ವೀರೇಂದ್ರ ಪಾಟೀಲರ ಕಾಲದಲ್ಲಿ 5 ಕೋಟಿ ರೂಪಾಯಿ ಕೊಟ್ಟಿರಿ; ಆಮೇಲೆ 10 ಕೋಟಿ ಕೊಟ್ಟರು. ಬಂಗಾರಪ್ಪನವರ ಕಾಲದಲ್ಲಿ 15 ಕೋಟಿ ಕೊಟ್ಟರು. ಒಂದು ತಿಂಗಳಿಗೆ ಇಲ್ಲಿ ಕೋಟಿ ರೂಪಾಯಿ ಕೊಟ್ಟರೂ ಒಂದು ವರ್ಷಕ್ಕೆ 25 ಲಕ್ಷ ರೂಪಾಯಿ ನೀವು ಕೊಡಬೇಕು. ಆದರೆ ನಾನು ನಿಮಗೆ ಹೇಳುವುದೇನೆಂದರೆ, ಆ ಬಾಷೆಯ ಬೆಳವಣಿಗೆ. ಅಲ್ಲಿಯ ಅನೇಕ ಕನ್ನಡ ಶಾಲೆಗಳ ಪರಿಸ್ಥಿತಿ ಏನು? ಕನ್ನಡ ಭಾಷೆಯ ಬೆಳವಣಿಗೆಯ ಪರಿಸ್ಥಿತಿ ಏನು? ಆ ಗಡಿ ಪ್ರದೇಶಗಳನ್ನು ನಾವು ಬೆಳವಣಿಗೆ ಮಾಡಿಲ್ಲ. ಪಕ್ಕದ ರಾಜ್ಯದವರು ಅವರನ್ನು ಕಡೆಗಾಣಿಸಿದ್ದಾರೆ. ಈ ದೃಷ್ಟಿಯಿಂದ ನಮ್ಮ ಗಡಿ ಪ್ರದೇಶಗಳು ತೀವ್ರವಾಗಿ ತೊಂದರೆಗೆ ಸಿಕ್ಕಿವೆ. ಆದ್ದರಿಂದ ಈ ಬೆಳವಣಿಗೆ ಬಗ್ಗೆ ಒಂದು ಹೊಸ ಚಿಂತನೆ ಏನಾದರೂ ಸರ್ಕಾರಕ್ಕೆ ಇದೆಯೇ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್ (ಅಚ್ಚುಕಟ್ಟು ಮತ್ತು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳು ಬಹಳ ಸೂಕ್ತವಾಗಿವೆ. ಇದರ ಮೇಲೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಕೇವಲ ಕಟ್ಟಡಗಳು ಮತ್ತು ರಸ್ತೆಗಳು ಮಾತ್ರ ಅಲ್ಲ, ಶಿಕ್ಷಣ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು, ಅಂಗನವಾಡಿ ಕೇಂದ್ರಗಳು, ಆರೋಗ್ಯ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಗೃಹ ನಿರ್ಮಾಣ, ಬಡತನ